**ಸಾಕ್ಷಿಯನ್ನು ದಿನಾಂಕ 22.2.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ 4 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ</u>**

ನನ್ನ ತಂದೆಯ ಹೆಸರು ಕೆಂಡಗಣ್ಣಪ್ಪ ಆಗಿರುತ್ತದೆ. ವೀರಭದ್ರೇಗೌಡ ಮತ್ತು ಸಣ್ಣಮ್ಮ ನನ್ನ ಅಜ್ಜ ಅಜ್ಜಿಯಾಗಿರುತ್ತಾರೆ. 1 ನೇ ವಾದಿ ನನ್ನ ತಾಯಿಯಾಗಬೇಕು. ವೀರಭದ್ರೇಗೌಡರ ತಂದೆಯ ಹೆಸರು ರಾಮೇಗೌಡ ಅಲಿಯಾಸ್ ಕಾಳೇಗೌಡ ಆಗಿರುತ್ತದೆ. ಸದರಿ ವೀರಭದ್ರೇಗೌಡರ ತಂದೆಯ ಹೆಸರು ಕಾಳೇಗೌಡ ಆಗಿದ್ದು ದಾವೆ ಹಾಕುವ ಸಲುವಾಗಿ ರಾಮೇಗೌಡ ಅಲಿಯಾಸ್ ಕಾಳೇಗೌಡ ಎಂದು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.59 ರಲ್ಲಿ ಒಟ್ಟು 7-17 ಎಕರೆ ಆಸ್ತಿ ಇರುತ್ತದೆ. ದಾವಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಗಳ ಖಾತೆಯು ಪುಟ್ಟಸ್ವಾಮಪ್ಪ ಮತ್ತು 4 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಸರ್ವೆ ನಂ.59 ರಲ್ಲಿ ಒಟ್ಟು 15-08 ಎಕರೆ ಇದ್ದು ಅದು ವೀರಭದ್ರೇಗೌಡರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ವೀರಭದ್ರೇಗೌಡ ಮತ್ತು ಲಿಂಗಪ್ಪನವರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿದಾರರು ಅವರು ಪರಸ್ಪರ ಸಹೋದರರಾಗಿರುತ್ತಾರೆ ಎನ್ನುವರು. ಲಿಂಗಪ್ಪನವರ ತಂದೆಯ ಹೆಸರು ರಾಮೇಗೌಡ ಮಾತ್ರ ಆಗಿದ್ದು ರಾಮೇಗೌಡ ಅಲಿಯಾಸ್ ಕಾಳೇಗೌಡ ಎಂದು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ರಾಮೇಗೌಡ ಅಲಿಯಾಸ್ ಕಾಳೇಗೌಡ ಎಂಬ ಹೆಸರನ್ನು ಸೃಷ್ಟಿ ಮಾಡಿಕೊಂಡು ಸರ್ವೆ ನಂ.59 ರ ಪೈಕಿ 7-16 ಎಕರೆ ಜಮೀನಿನ ಖಾತೆಯನ್ನು ಲಿಂಗಪ್ಪ ಬಿನ್ ರಾಮೇಗೌಡ ಅಲಿಯಾಸ್ ಕಾಳೇಗೌಡ ಎಂದು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.50 ರಲ್ಲಿ 2-34 ಎಕರೆ ಜಮೀನು ವೀರಭದ್ರೇಗೌಡರ ಹೆಸರಿನಲ್ಲಿದ್ದು ಸದರಿ ಆಸ್ತಿಯನ್ನು ಸಹ ನಾವು ಲಿಂಗಪ್ಪ ಬಿನ್ ರಾಮೇಗೌಡ ಅಲಿಯಾಸ್ ಕಾಳೇಗೌಡ ಎಂಬುವವರ ಹೆಸರಿನಲ್ಲಿ ಖಾತೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.15 ರ 15-08 ಎಕರೆ ಜಮೀನು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿದಾರರು 7-17 ಎಕರೆ ಜಮೀನು ಮಾತ್ರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎನ್ನುವರು. ಸರ್ವೆ ನಂ.50 ರಲ್ಲಿ 2-34 ಎಕರೆ ಜಮೀನು ಪಿತ್ರಾರ್ಜಿತ ಆಸ್ತಿಯಾಗಿದ್ದರೂ ಸಹ ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎನ್ನುವರು. ಪ್ರತಿವಾದಿಯರ ಹೆಸರಿನಲ್ಲಿರುವ ಆಸ್ತಿಗೆ ಮಾತ್ರ ನಾವು ದಾವೆ ಹಾಕಿರುತ್ತೇವೆ ಎಂದರೆ ಸಾಕ್ಷಿದಾರರು ನನ್ನ ತಾತ ವೀರಭದ್ರೇಗೌಡರ ಹೆಸರಿನಲ್ಲಿರುವ

ಆಸ್ತಿಗೆ ದಾವೆ ಹಾಕಿರುತ್ತೇವೆ ಎನ್ನುವರು. ಪ್ರತಿವಾದಿಗಳ ಹೆಸರಿಗೆ ದಾವಆಸ್ತಿಯ ಖಾತೆಯು 1986-87 ರಲ್ಲಿ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ನಮಗೆ ಗೊತ್ತಿಲ್ಲದಂತೆ ಖಾತೆ ಮಾಡಿಸಿಕೊಂಡಿರುತ್ತಾರೆ ಎನ್ನುವರು. ಯಾವ ರೀತಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಗಳ ಖಾತೆಯು ಪ್ರತಿವಾದಿಯರ ಹೆಸರಿನಲ್ಲಿರುವ ವಿಚಾರ 36 ವರ್ಷಗಳ ಹಿಂದೆ ಗೊತ್ತಾಗಿದ್ದರೂ ಸಹ ಈಗ ಆಸ್ತಿಗಳಲ್ಲಿ ಭಾಗ ಬರಬೇಕೆಂದು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಗಳಲ್ಲಿ ಭಾಗ ಕೇಳಲು ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಹೆಸರಿನಲ್ಲಿ ದಾವಆಸ್ತಿಗಳ ಖಾತೆ ಇರುವುದರಿಂದ ಅವರು ದಾವಆಸ್ತಿಯನ್ನು ಮಾರಾಟ ಮಾಡುತ್ತಾರೆ ಎಂದು ಸುಳ್ಳು ಕಾರಣ ಸೃಷ್ಟಿ ಮಾಡಿ ದಾವೆ ಹಾಕಿರುತ್ತೇವೆ ಎಂದರೆ ಸಾಕ್ಷಿದಾರರು 1 ಎಕರೆ ಜಮೀನು ಈಗಾಗಲೇ ಮಾರಾಟ ಆಗಿರುತ್ತದೆ ಎನ್ನುವರು.

4 ಮತ್ತು ಮೃತ 5 ನೇ ಪ್ರತಿವಾದಿಯು ನಮ್ಮ ವಿರುದ್ಧ ಸರ್ವೆ ನಂ.50 ಕ್ಕೆ ಸಂಬಂಧಪಟ್ಟಂತೆ ಮಾಲೀಕತ್ವ ಮತ್ತು ನಿರ್ಬಂಧಕಾಜ್ಞೆ ಕೋರಿ ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.50 ರ ಆಸ್ತಿಯು ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯು 4 ಮತ್ತು 5 ನೇ ಪ್ರತಿವಾದಿಯರ ಹೆಸರಿನಲ್ಲಿದ್ದು ಸದರಿ ಆಸ್ತಿಗೆ ನಾವು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ1 ರಂತೆ 14-33 ಎಕರೆ ಜಮೀನು ಇದ್ದು ಲಿಂಗಪ್ಪನ ಹೆಸರಿಗೆ 7-16 ಎಕರೆ, ಪುಟ್ಟಸ್ವಾಮಪ್ಪನ ಹೆಸರಿಗೆ 7-17 ಎಕರೆ ಜಮೀನಿನ ಖಾತೆಯು ತಹಶೀಲ್ದಾರ್ ರವರ ಆದೇಶದಂತೆ ಆಗಿರುತ್ತದೆ ಎಂದರೆ ಸರಿ. ನಿಪಿ1 ರ ಕಲಂ 10 ರಲ್ಲಿ ಕಂಡು ಬರುವ ದಂಡಪಾಣಿ ಯಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ 7-17 ಎಕರೆ ಜಮೀನನ್ನು ಪುಟ್ಟಸ್ವಾಮಪ್ಪನವರು ಸದರಿ ದಂಡಪಾಣಿ ರವರಿಗೆ ಭೋಗ್ಯ ಮಾಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಲಿಂಗಪ್ಪನವರಿಗೆ 10 ಜನ ಮಕ್ಕಳಿರುತ್ತಾರೆ. ಪುಟ್ಟಸ್ವಾಮಪ್ಪನವರಿಗೆ ಹಿರಿಯ ಹೆಂಡತಿ ಮೂಲಕ ಶೋಭ ಮತ್ತು ರಮೇಶ ಎಂಬ ಮಕ್ಕಳಿದ್ದು, 2 ನೇ ಹೆಂಡತಿಯಾದ ಸುಶೀಲಮ್ಮನಿಗೆ 5 ನೇ ಪ್ರತಿವಾದಿ ಒಬ್ಬನೇ ಮಗನಾಗಿದ್ದು ಆತನು ಈಗ ತೀರಿಕೊಂಡಿರುತ್ತಾನೆ. ನನ್ನ ತಾಯಿಗೆ ನಾಗಮ್ಮ ಎಂಬ ಸಹೋದರಿಯಿರುತ್ತಾರೆ. ನನ್ನ ದಾವಪತ್ರದಲ್ಲಿ ಹೇಳಿರುವ ವಂಶಸ್ಥರಿಗೆ ಸೇರಿದ ಎಲ್ಲ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸೇರಿದ ಎಲ್ಲ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದಿರುವುದರಿಂದ ವಿಭಾಗ ಕೋರಲು ನಮಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.